ದಿನಾಂಕ: 08.07.2022 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ. ಸತ್ಯನಾರಾಯಣರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಎ. ಸತ್ಯನಾರಾಯಣರಾಜ್, ನೋಡಲ್ ಅಧಿಕಾರಿಗಳು ಹಾಗೂ ಸದಸ್ಯರು
2. ಶ್ರೀ ಶ್ರೀನಿವಾಸರಾಜು.ಟಿ ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀ ವೆಂಕಟೇಶ್, ಬಿಲ್ ಕಲೆಕ್ಟರ್
4. ಶ್ರೀ ರಘು, ಸ್ಥಳೀಯರು
5. ಶ್ರೀ ಭರತ್, ಸ್ಥಳೀಯರು
6. ಶ್ರೀ ಶಿವಕುಮಾರ್ ಹಾಗೂ ಇತರರು

ದಿನಾಂಕ: 08.07.2022 ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ ಎಸ್.ಬಿ.ಐ. ಆಫೀರರ್ಸ್ ಸಮುದಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದರಿಂದ ತುರ್ತಾಗಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ದೂರುಗಳ ಮುಖಾಂತರ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ರವರು ರಸ್ತೆಗುಂಡಿಗಳನ್ನು ಮುಚ್ಚುವ ಕೆಲಸ ಪ್ರಗತಿಯಲ್ಲಿದ್ದು, ಈಗಾಗಲೇ ಹಲವಾರು ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಮುಚ್ಚಿರುವ ಗುಂಡಿಗಳ ವಿವರಣೆಯನ್ನು ತಂತ್ರಾಂಶದಲ್ಲೂ ಸಹ ಬಿ.ಬಿ.ಎಂ.ಪಿ. ವಿವಿಧ ಗ್ರೂಫ್‌ಗಳಲ್ಲಿ ಅಪ್ ಲೋಡ್ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.

2. ವಾರ್ಡ್ ವ್ಯಾಪ್ತಿಯಲ್ಲಿ ಈ ಹಿಂದೆ ಜೋರಾಗಿ ಸುರಿದ ಮಳೆಯ ಕಾರಣದಿಂದ ತಗ್ಗು ಪ್ರದೇಶದಲ್ಲಿ ಒಟ್ಟು 57 ಮನೆಗಳಿಗೆ ನೀರು ನುಗ್ಗಿ ಹಾನಿ ಉಂಟಾಗಿರುತ್ತದೆ ಹಾಗೂ ಮಳೆ ನೀರು ಪರಿಹಾರ ಕೋರಿ ಸಲ್ಲಿಸಿರುವಂತಹ ಅರ್ಜಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ, ಮಳೆ ನೀರು ಪರಿಹಾರ ಕೋರಿರುವಂತಹ ಕಡತವು ಮೇಲಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Srinivasraju T 8/7/22
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned by CamScanner